ಸ॥ 1909ನೆ ಇಸವಿ ಜನವರಿ 8ನೆ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ, ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಕೊಡಬೇಕಾದ ಮೊಬಲಗು.	ಪ್ರತಿವಾದಿಗಳಿಂದ ಕೊಡಬೇಕಾದ ಮೊಬಲಗು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
1	ಶ್ರೀರಂಗಪಟ್ಟಣದಲ್ಲಿರುವ ಚೌಬೀನೆ ಶಿದ್ದಯ್ಯನವರ ಮೊಮ್ಮಗನೆಯ್ಯ.	ರೂ. ಆ. ಪೈ. 85– 4–11	...	ಈ ಕೋರ್ಟು ಸಿವಿಲ್ 395-05-6ನೆ ನಂಬರು ಡಿಕ್ರಿ ಬಾಬತು.	
2	ಶ್ರೀರಂಗಪಟ್ಟಣದ ತಾಲ್ಲೂಕು ಕ್ಯಾತನಹಳ್ಳಿ ಹೋಬಳಿ ಕಡತನಾಳಿನಲ್ಲಿರುವ ರಾಜೆಗೌಡ ಉರಫ್ ಚಿಕ್ಕಹೈದ.	94–13– 9	..	ಸಿವಿಲ್ 1376-04-5ನೆ ನಂಬರು ಡಿಕ್ರಿ ಬಾಬತು.	

ಎಸ್. ಕೃಷ್ಣರಾವ್,
ಮುನ್ಸೀಫ್.

ಮೈಸೂರು ಅಡಿಷನಲ್ ಮುನ್ಸೀಫ್ ಕೋರ್ಟಿನಲ್ಲಿ.

ನೋಟಿಸ್.

ತಾರೀಖು 21ನೆ ಜನವರಿ 1909.

ಸ॥ 1908—09ನೆ ಇಸವಿ ಸಿವಿಲ್ ನಂಬರು 376.

ಸ॥ 1908—09ನೆ ಇಸವಿ-ಮಿಸ್ ನಂಬರು 605.

ವಾದೀರು. ಪ್ರತಿವಾದೀರು.

ಎಡತೊರೆ ತಾಲ್ಲೂಕು ಕಸಬಾ ಹೋಬಳಿ ಮಾರ್ಚಹಳ್ಳಿ ಗ್ರಾಮದ ವಾಸಸ್ಥರಾದ ಹತ್ತುಜನ ರೈತರು ಇವರಿಗೋಸ್ಕರ—

(1) ಹೆಗ್ಗಡಿಗಳ ಜಾತಿ ಆನಂದೂರು ಮರಿಗೌಡನ ಬೊಚ್ಚೇಗೌಡ, (2) ರಾಜಾವಾರದ ದಾಸರಾಜು ಮಗ ಗುರ್ರಾಜು, (3) ಹೆಗ್ಗಡಿ ಜಾತಿ ಹೊಂಬೇಗೌಡನ ಮಗ ಶಿದ್ದೇಗೌಡ, (4) ಪರಿವಾರದ ದ್ಯಾವನಾಯಿಕನ ಮಗ ಶಿದ್ದನಾಯಿಕ ಉರಫ್ ಚಿಕ್ಕಹೈದಾ, (5) ಹೆಗ್ಗಡಿಜಾತಿ ಜೂಕ್ಕೆಗೌಡನ ಮಗ ಮಾಲೇಗೌಡ.

ಡಿಟೋ ಸ್ಥಳದವರು 1ನೆ ಶ್ಯಾನುಭೋಗ ನರಸಯ್ಯನವರ ಮಗ ತಿಪ್ಪಯ್ಯ, 2ನೆ ಇವನ ತಮ್ಮ ಕೃಷ್ಣಪ್ಪ, 3ನೆ—1ನೆ ಪ್ರತಿವಾದಿ ಭಾವಮೈದುನ ಶಾಮೈಯ್ಯನ ಮಗ ಅನಂತರಾಮೈಯ್ಯ, 4ನೆ ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ಬೆಂಕೀಪುರದಲ್ಲಿರುವ ಶಿವಾಚಾರದ ಜಾತಿ ಬೋಳಪ್ಪನ ಮಗ ರಾಮೈಯ್ಯ.

ಇದರಿಂದ ಸಮಸ್ತ ಜನಗಳಿಗೂ ಸಿವಿಲ್ ಪ್ರೊಸೀಜ್ಯೂರ್ ಕೋಡು 30ನೆ ಸೆಕ್ಷನ್ ಪ್ರಕಾರ ಖಬರಂಗಪಡಿಸುವದೇನೆಂದರೆ—

ಮೇಲ್ಕಂಡ ನಂಬರು ಮೊಕದ್ದಮಾದಲ್ಲಿ ವಾದೀರು ಎಡತೊರೆ ತಾಲ್ಲೂಕು ಕಸಬಾ ಹೋಬಳಿ ಮಾರ್ಚಹಳ್ಳಿ ಗ್ರಾಮಸ್ಥರಿಂದ ಹತ್ತೂಜನ ರೈತರಿಗೋಸ್ಕರ ತಾವು ದಾವಾ ಮಾಡಿರುತ್ತಾರೆ. ಸದರೀ ಮಾರ್ಚಹಳ್ಳಿ ಗ್ರಾಮಸ್ಥರಾದ ಹತ್ತೂಜನರಿಗೆ ಶೇರಿರುವ ಅಂದರೆ ಬಸವೇಶ್ವರ ದೇವರಿಗಾಗಿ ಏರ್ಪಡಿಸಲ್ಪಟ್ಟು ಇರುವ ಈ ಕೆಳಗೆ ಕಂಡ ಷೆಡ್ಯೂಲು ಮನೆಯನ್ನು 1—2—3ನೆ ಪ್ರತಿವಾದೀರು ತಮಿಗೆ 4ನೆ ಪ್ರತಿವಾದಿಯಿಂದ ಖರೀದಿ ಆಗಿರುತ್ತೆ. ತಾವು ವಾದೀರಿಗೆ ಅವರು ರಿಪೇರಿ ಮಾಡುವದಕ್ಕೆ ಬಂದವೇಳೆಯಲ್ಲಿ ಮನೆ ಬಿಡುವದಿಲ್ಲವೆಂದು ಖಾಲೀ ತಕರಾರು ನಡಿಸಿದ ನಿಮಿತ್ಯ ಸದರೀ ಮನೆಯನ್ನು ಬರಮಾಡಿಕೊಳ್ಳಲು ಈ ದಾವಾ ತರಲ್ಪಟ್ಟಿರುತ್ತೆ. ಸದರೀ ದಾವಾಕ್ಕೆ ಪಾರ್ಟಿಯಾಗಿ ಸೇರಬೇಕೆಂದು ಅಪೇಕ್ಷಿಸುವಂಥಾವರು ಈ ಸಿವಿಲ್ ಕೇಸು ಹಿಯರಿಂಗು ಇರತಕ್ಕ 1909ನೆ ಇಸವಿ ಫೆಬ್ರವರಿ ಎಂಟನೆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬು ರೂಬು ಹಾಜರಾಗಿ ಮನವೇ ಮಾಡಿಕೊಳ್ಳತಕ್ಕದ್ದು.

ಷೆಡ್ಯೂಲು.

ಎಡತೊರೆ ತಾಲ್ಲೂಕು ಕಸಬಾ ಹೋಬಳಿ ಮಾರ್ಚಹಳ್ಳಿ ಗ್ರಾಮದಲ್ಲಿರುವ ಪೂರ್ವಕ್ಕೆ—ದಾರೀ, ಪಶ್ಚಿಮಕ್ಕೆ—ಗಲ್ಲಿ ಮತ್ತು ನಂಜಯ್ಯನ ಮನೆ, ದಕ್ಷಿಣಕ್ಕೆ—ರಾಜ ಬೀದಿ, ಉತ್ತರಕ್ಕೆ—ಹತ್ತು ಜನಗಳು ನೀರು ಸೇದಿಕೊಳ್ಳುವ ಭಾವಿಮುಳ್ಳ ಕೊಳದ ಕಟ್ಟಡ, ಈ ಮಧ್ಯೆ ಹುಲ್ಲು ಮನೆ ಅಂಕಣ 5, ಇದಕ್ಕೆ ಸೇರಿದ ಹಿಂಭಾಗದ ಹಿತ್ತಲೂ ಸಹ ಉಳ್ಳಮನೆ.

ಕೆ. ಲಕ್ಷ್ಮೀನಾರಣಪ್ಪಯ್ಯ,
ಅಡಿಷನಲ್ ಮುನ್ಸೀಫ್.

ಮೈಸೂರು ಗವರ್ನ್‌ಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್‌ರವರ ಆಫೀಸ್, ಬೆಂಗಳೂರು.

ಸರ್‌ಕ್ಯುಲರ್ ನಂ. 369—Cs. 24, ತಾರೀಖು 11–12ನೆ ಜನವರಿ 1909ನೆ ಇಸವಿ.

ಮೈಸೂರು ಗವರ್ನ್‌ಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟರಾದ ಕೋ ಆಪರೇಟಿವ್ ಸೊಸೈಟಿಗಳು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಪಬ್ಲಿಕ್ ಅಕೌಂಟನ್ನು ಇಡಬಹುದೆಂದು ಇಂಡಿಯಾ ಗವರ್ನ್‌ಮೆಂಟಿನವರು

ಅಪ್ಪಣೆ ಮಾಡಿರುತ್ತಾರೆ. ಸದರಿ ಗವರ್ನಮೆಂಟನವರಿಂದ ಬದಲಾಯಿಸಲ್ಪಟ್ಟ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನ 42 (b)ನೆ ರೂಲು ಈ ಕೆಳಗೆ ವಿವರಿಸುವಂತೆ ಇರುತ್ತೆ :—

"ಇಂಡಿಯಾ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿಗಳ ಆಕ್ಟ್ ಮತ್ತು ನೇಟಿವ್ ಸಂಸ್ಥಾನಗಳಲ್ಲಿ ಜಾರಿಯಲ್ಲಿರುವ ಅದೇ ಸಂಬಂಧವಾದ ಕಾನೂನು—ಇವುಗಳನ್ನನುಸರಿಸಿ ರಿಜಿಸ್ಟರು ಮಾಡಲ್ಪಡುವ ಸೊಸೈಟಿಗಳ ಸೆಕ್ರಿಟರಿಗಳು, ಖಜಾನ್ಚಿಯವರು, ಅಥವಾ ಮ್ಯಾನೇಜರುಗಳು ಹಣವನ್ನು ಡಿಪಾಜಿಟ್ ಇಡಬಹುದು."

2. ಸೊಸೈಟಿಗಳಿಗೆ ಪಬ್ಲಿಕ್ ಅಕೌಂಟನ್ನು ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಇಡುವದರಿಂದ ಈ ಕೆಳಗೆ ನಮೂದಿಸಿರುವ ರಿಯಾಯಿತಿಗಳು ದೊರೆಯುವವು.

ಯಾವ ಸೊಸೈಟಿಯೇ ಆಗಲಿ ಯಾವಾಗಲೂ 10,000 ರೂಪಾಯಿಗೆ ಮಿಾರಿ ಡಿಪಾಜಿಟ್ಟು ಇಡಕೂಡದು, ಮತ್ತು 10,000 ರೂಪಾಯಿಗೆ ಮಿಾರಿದ ವೊಬಲಗಿಗೆ ಬಡ್ಡಿ ದೊರೆಯುವದಿಲ್ಲ. ಡಿಪಾಜಿಟ್ಟನ್ನು ವಾಪಸು ತೆಗದುಕೊಳ್ಳಬೇಕಾದರೆ ಚಾಲ್ತಿ ಡಿಪಾಜಿಟ್ಟಿನಿಂದ ಮಾಹೆಯಾನಾ 1,000 ರೂಪಾಯಿಗೆ ಮಿಾರಿ ವಾಪಸು ಅಪೇಕ್ಷಿಸಕೂಡದು. ಆದರೆ ಇದಕ್ಕಿಂತಲೂ ಜಾಸ್ತಿ ವೊಬಲಗು ವಾಪಸು ತೆಗೆಯಬೇಕಾದರೆ ಬ್ಯಾಂದು ತಿಂಗಳಿಗೆ ಮುಂಚಿತವಾಗಿಯೇ ಪೋಸ್ಟ್ ಮಾಸ್ಟರಿಗೆ ಲಿಖಿತ ಮೂಲಕ ತಿಳಿಯಪಡಿಸಿ ಆ ರೀತಿ ತೆಗದುಕೊಳ್ಳಬಹುದು. ಎರಡು ಮೂರು ಸಲ ಕಿತ್ತಾವಾರಾಗಿ ಹಣವನ್ನಪೇಕ್ಷಿಸುವ ಪಕ್ಷದಲ್ಲಿ ಎಷ್ಟುಕಿತ್ತಾ ಎಂಬುವದನ್ನೂ, ಯಾವ ತಾರೀಖುಗಳಲ್ಲಿ ಬೇಕಾಗುತ್ತೆಂಬುವದನ್ನೂ ನಮೂದಿಸಬೇಕು.

3. ಇಂಥ "ಪಬ್ಲಿಕ್ ಅಕೌಂಟನ್ನು" ಪೋಸ್ಟಾಫೀಸಿನ ಸೇವಿಂಗ್ಸ್ ಬ್ಯಾಂಕುಗಳಲ್ಲಿಡಲು ಅಪೇಕ್ಷಿಪಡುವ ಸೊಸೈಟಿಗಳು ಈ ಆಫೀಸು ಮೂಲಕ ಪೋಸ್ಟ್ ಮಾಸ್ಟರ್ ಜನರಲ್ ರವರಿಗೆ ಅವಕ್ಕಾಗಿರುವ ನಮೂನೆಯಲ್ಲಿ ದರಖಾಸ್ತು ಬರೆದುಕೊಳ್ಳಬಹುದು.

4. ಈ ಪಬ್ಲಿಕ್ ಅಕೌಂಟಿನ ವಿಷಯವಾಗಿ ಇನ್ನೂ ವಿಶೇಷ ತಿಳಿಯಬೇಕಾದರೆ ಪೋಸ್ಟಲ್ ಗೈಡು (ಏಪ್ರಿಲ್ 1908ನೆ ಇಸವಿ) 194-195ನೆ ಪುಟಗಳನ್ನು ನೋಡಬೇಕು.

ಎಂ. ಶ್ಯಾಮರಾವ್,
ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್.

ಕೊಡಗು ಜೀಲ್ಲಾ ಕಮಿಷನರವರಿಂದ ಕೊಡೋಣಾದ

ಇಸ್ತಿಹಾರ್‌ನಾಮೆ.

ದರ್ಜಾಗ್ಹಾ, ಬಂಗಳೂರು, ತಾರೀಖು 7ನೆ ಜನವರಿ 1909ನೆ ಇಸವಿ.

ನಂ. 7. ಈ ಮೂಲಕವಾಗಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಸನ್ 1909ನೆ ಇಸವಿ ಏಪ್ರಿಲ್ ತಾರೀಖು 1ರ ಲಾಗಾಯಿತು 1910ನೆ ಇಸವಿ ಮಾರ್ಚಿ ತಾರೀಖು 31ರ ವರಿಗೆ ಕೊಡಗು ಸೀಮೆಯಲ್ಲಿ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗೆಯುವದಕ್ಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದ ಕಸಕಸೆಯಿಂದ ತಯಾರಾದ ನಿಷಾ ವಸ್ತುಗಳನ್ನು ಚಿಲ್ಲರೆಯಾಗಿ ಮಾರುವದಕ್ಕೆ ಸ್ವಾತಂತ್ರ್ಯವನ್ನು ಈ ಕೆಳಗೆ ಕಾಣಿಸಿರುವ ವ್ಯಾರಿಗೆ ಹರಾಜು ಮಾಡಲ್ಪಡುವದು.

(i) 1909ನೆ ಇಸವಿ ಮಾರ್ಚಿ 12ನೆ ತಾರೀಖಿನಲ್ಲಿ ಮಡಿಕೆರೆಯಲ್ಲಿ ಮಡಿಕೆರೆ ತಾಲ್ಲೂಕು ಸುಬೇದಾರರ ಮುಂದೆ.

(ii) 1909ನೆ ಇಸವಿ ಮಾರ್ಚಿ 3ನೆ ತಾರೀಖಿನಲ್ಲಿ ವೀರರಾಜಪ್ಯಾಟೆಯಲ್ಲಿ ಎಡಿನಾಲ್ಕು ನಾಡು ತಾಲ್ಲೂಕು ಸುಬೇದಾರರ ಮುಂದೆ.

(iii) 1909ನೆ ಇಸವಿ ಮಾರ್ಚಿ 7ನೆ ತಾರೀಖಿನಲ್ಲಿ ಗೋಣಿಕೊಪ್ಪಲ್ಲಲ್ಲಿ ಕಿಗ್ಗಟ್ಟುನಾಡು ತಾಲ್ಲೂಕು ಸುಬೇದಾರರ ಮುಂದೆ.

2. ವಿಕ್ರಯವು ಕೊಡಗು ಕಮಿಷನರವರ ಮಂಜೂರಾತಿಗೆ ಒಳಪಟ್ಟಿರುತ್ತದೆ. ಅವರು ಯಾವಕಾರಣವೂ ನಮೂದಿಸದೆ ಚಿಡದರಖಾಸ್ತುದಾರನಿಗೆ ಲೈಸೆನ್ಸನ್ನು ತಿರಸ್ಕರಿಸಬಹುದು. ಹೆಂಗಸಿಗೆ ಲೈಸೆನ್ಸು ಕೊಡಲ್ಪಡುವದಿಲ್ಲ.

3. ತಾನು ಮೊದಲೇ ದರಖಾಸ್ತು ಮಾಡಿದ ವೊಬಲಗನ್ನು ಕೊಟ್ಟಿದ್ದ ಪಕ್ಷದಲ್ಲಿ ಚೀಫ್ ಕಮಿಷನರವರಿಂದ ವಿಧಿಸೋಣಾದ ಫಾರಮಿನಲ್ಲಿ ಕಮಿಷನರವರಿಂದ ಮಂಜೂರಾದ ದರಖಾಸ್ತುದಾರನಿಗೆ ಲೈಸೆನ್ಸು ಕೊಡಲ್ಪಡುವದು.

4. ತೊಲ ಒಂದರ 4 ಆಣೆ ಪೇರೆ 80 ತೊಲದ ಸೇರಿಗೆ 20 ರೂಪಾಯಿ ವ್ಯಾರಿಗೆ ಕಮಿಷನರವರಿಂದ ಲೈಸೆನ್ಸುದಾರನಿಗೆ ಅಫೀಂ ಕೊಡಲ್ಪಡುತ್ತೆ.

5. ತೊಲ ಒಂದರ 9 ಆಣೆ ಪೇರೆ 80 ತೊಲದ ಸೇರಿಗೆ ಒಂದೇ ಬೆಲೆಯಾಗಿ 45 ರೂಪಾಯಿ ವ್ಯಾರಿಗೆ ಅಫೀಮನ್ನು ಲೈಸೆನ್ಸುದಾರನು ಜನಗಳಿಗೆ ಮಾರತಕ್ಕದ್ದು.

6. ಚಿಲ್ಲರೆಯಾಗಿ ಮಾರುವ ಅಂಗಡಿಗಳು ಮೂರೇ ಇರುವವು. ಅವು ಯಾವವಂದರೆ :—

ಮಡಿಕೇರಿಯಲ್ಲಿ ಒಂದು.
ವೀರರಾಜಪ್ಯಾಟೆಯಲ್ಲಿ ಒಂದು.
ಗೋಣಿಕೊಪ್ಪಲ್ಲಲ್ಲಿ ಒಂದು.

7. ಇನ್ನು ಹೆಚ್ಚಿಗೆ ಬೇಕಾಗುವ ತಪ್ಸೀಲುಗಳನ್ನು ಮಡಿಕೇರಿಯಲ್ಲಿ ಕೊಡಗು ಕಮಿಷನರವರಲ್ಲಿ ದರ್ಖಾಸ್ತು ಮಾಡಿ ತಿಳಿದುಕೊಳ್ಳಬಹುದು.

ಟಿ. ಬಿ. ಕೋಪ ಲ್ಯಾಂಡ್,
ಚೀಫ್ ಕಮಿಷನರವರ ಸೆಕ್ರಿಟರಿಯವರು.